# ಟೋಲ್ ಸಂಗ್ರಹಕ್ಕೆ ಉಪಗ್ರಹ ಬಳಕೆ

ಹೆದ್ದಾರಿಗಳಲ್ಲಿನ ಟೋಲ್ ಸಂಗ್ರಹ ಕೇಂದ್ರಗಳಲ್ಲಿ ಫಾಸ್‌ಟ್ಯಾಗ್ ವ್ಯವಸ್ಥೆ ಕೊನೆಗೊಳ್ಳುವ ಕಾಲ ಸನ್ನಿಹಿತವಾಗಿದೆ. ಹೊಸ ವ್ಯವಸ್ಥೆಯಲ್ಲಿ ಉಪಗ್ರಹ ಆಧರಿತ ಟೋಲ್ ಸಂಗ್ರಹ ನಡೆಯಲಿದೆ.

**■ ಶಶಿಕುಮಾರ್ ಸಿ.**



ಫಾಸ್‌ಟ್ಯಾಗ್ ಟೋಲ್ ಸಂಗ್ರಹಕ್ಕಿಂತ ಭಿನ್ನವಾದ, 'ಉಪಗ್ರಹ ಆಧರಿತ ಟೋಲ್ ವ್ಯವಸ್ಥೆ' ಜಾರಿಗೆ ತರಲು ಕೇಂದ್ರ ಸರ್ಕಾರ ತಯಾರಿ ನಡೆಸಿದೆ. ವರ್ಷದ ಹಿಂದೆಯೇ ಈ ಬಗ್ಗೆ ಚಿಂತನೆ ನಡೆಸಿದ್ದ ಕೇಂದ್ರ ಸರ್ಕಾರವು ಈಗ ಈ ಯೋಜನೆಗೆ ಅಂತಿಮ ಸ್ಪರ್ಶ ನೀಡುವ ನಿಟ್ಟಿನಲ್ಲಿ ತೊಡಗಿಕೊಂಡಿದೆ. ಜೊತೆಗೆ ಪ್ರಾಯೋಗಿಕ ಪರೀಕ್ಷೆಗೂ ಸಜ್ಜಾಗುತ್ತಿದೆ.

ಟೋಲ್ ಸಂಗ್ರಹ ಕೇಂದ್ರಗಳಲ್ಲಿ ಸರದಿ ನಿಂತು ಶುಲ್ಕ ಪಾವತಿಸುವುದನ್ನು ಕೊನೆಗಾಣಿಸಿ, ಪ್ರಯಾಣಿಕರ ಸಮಯ ಉಳಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು 2021ರಲ್ಲಿ ಫಾಸ್‌ಟ್ಯಾಗ್ ಟೋಲ್ ಸಂಗ್ರಹ ವ್ಯವಸ್ಥೆ ಅಳವಡಿಸಿಕೊಂಡಿತ್ತು. ಆದರೆ, ಈ ವ್ಯವಸ್ಥೆಯಿಂದಲೂ ಕೆಲ ಟೋಲ್ ಸಂಗ್ರಹ ಕೇಂದ್ರಗಳಲ್ಲಿ ವಾಹನಗಳು ಹತ್ತಾರು ನಿಮಿಷಗಳವರೆಗೆ ಸರದಿ ನಿಲ್ಲುವುದು ತಪ್ಪಲಿಲ್ಲ.

'ಉಪಗ್ರಹ ಆಧರಿತ ಟೋಲ್ ವ್ಯವಸ್ಥೆ' ಜಾರಿಗೆ ಬಂದಲ್ಲಿ ಟೋಲ್ ಕೇಂದ್ರಗಳಲ್ಲಿ ಫಾಸ್‌ಟ್ಯಾಗ್ ಸ್ಕ್ಯಾನ್‌ಗಾಗಿ ವಾಹನ ನಿಲ್ಲಿಸುವ ಅಗತ್ಯ ಇರುವುದಿಲ್ಲ. ಸರದಿ ನಿಲ್ಲುವುದು ತಪ್ಪಲಿದೆ. ಜೊತೆಗೆ ಪ್ರಯಾಣಿಕರ ಸಮಯ ವ್ಯರ್ಥವಾಗದು ಎಂಬುದು ಕೇಂದ್ರ ಸರ್ಕಾರದ ಮಾತು.

ಈಚೆಗೆ ಈ ಬಗ್ಗೆ ಮಾತನಾಡಿರುವ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ, "ಟೋಲ್ ಕೇಂದ್ರಗಳಿಗೆ ನಾವು ಇತಿಶ್ರೀ ಹಾಡಲಿದ್ದೇವೆ. ಆ ಸ್ಥಾನಕ್ಕೆ 'ಉಪಗ್ರಹ ಆಧರಿತ ಟೋಲ್ ವ್ಯವಸ್ಥೆ' ಬರಲಿದೆ. ಹೆದ್ದಾರಿಗಳಲ್ಲಿ ಪ್ರಯಾಣಿಕರು ತಮ್ಮ ಸ್ವಂತ ವಾಹನಗಳಲ್ಲಿ ಎಷ್ಟು ಅಂತರ ಕ್ರಮಿಸುತ್ತಾರೆಯೋ ಅದರ ಆಧಾರದ ಮೇಲೆ ಅವರ ಬ್ಯಾಂಕ್ ಖಾತೆಯಿಂದ ಶುಲ್ಕವು ಕಡಿತಗೊಳ್ಳಲಿದೆ. ಇದು, ವಾಹನ ಸವಾರರ ಹಣ ಹಾಗೂ ಸಮಯವನ್ನು ಉಳಿಸಲಿದೆ" ಎಂದಿದ್ದಾರೆ.

### ಯಾವೆಲ್ಲ ದೇಶಗಳಲ್ಲಿ ಜಾರಿ

ಈ ವ್ಯವಸ್ಥೆಯಲ್ಲಿ ಈಗಾಗಲೇ ವಿಶ್ವದ ಹಲವು ದೇಶಗಳು ಜಾರಿಗೊಳಿಸಿವೆ. ಜರ್ಮನಿ, ರಷ್ಯಾ ಮತ್ತು ಸ್ಲೋವಾಕಿಯಾದಂತಹ ಯೂರೋಪಿಯನ್ ರಾಷ್ಟ್ರಗಳು ತಮ್ಮ ಹೆದ್ದಾರಿಗಳಲ್ಲಿ ಪ್ರಯಾಣಿಕರ ಪ್ರಯಾಣವನ್ನು ಸುಗಮಗೊಳಿಸಲು ಈ ವ್ಯವಸ್ಥೆಯನ್ನು ಯಶಸ್ವಿಯಾಗಿ ಬಳಸುತ್ತಿವೆ. ಈ ದೇಶಗಳಲ್ಲಿನ ಸಾವಿರಾರು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಈ ವ್ಯವಸ್ಥೆ ಅಳವಡಿಸಲಾಗಿದೆ.

### ಹೇಗೆ ಕಾರ್ಯ ನಿರ್ವಹಿಸಲಿದೆ?

'ಉಪಗ್ರಹ ಆಧರಿತ ಟೋಲ್ ವ್ಯವಸ್ಥೆ'ಯು ಉಪಗ್ರಹ ಆಧರಿತವಾಗಿಯೇ ಕಾರ್ಯ ನಿರ್ವಹಿಸಲಿದೆ. ಈ ವ್ಯವಸ್ಥೆಯಲ್ಲಿ ಫಾಸ್‌ಟ್ಯಾಗ್ ಐಡಿಗಳನ್ನು ಸ್ಕ್ಯಾನ್ ಮಾಡುವುದಿಲ್ಲ. ಬದಲಿಗೆ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳ ನಂಬರ್ ಪ್ಲೇಟ್‌ಗಳನ್ನು ಸ್ಕ್ಯಾನ್ ಮಾಡಿ, ಆ ನಂಬರ್ ಪ್ಲೇಟ್‌ಗೆ ಲಿಂಕ್ ಆಗಿರುವ ಬ್ಯಾಂಕ್ ಖಾತೆಯಿಂದ ಟೋಲ್ ಶುಲ್ಕವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕಡಿತಗೊಳಿಸಲಿದೆ.

ವಾಹನಗಳ ನಂಬರ್ ಪ್ಲೇಟ್ ಸ್ಕ್ಯಾನ್ ಮಾಡಲು ದೇಶದ ಹೆದ್ದಾರಿಗಳಲ್ಲಿ ವರ್ಚುವಲ್ ಟೋಲ್‌ಗಳನ್ನು ನಿರ್ಮಿಸಬೇಕಾಗಿದೆ. ವರ್ಚುವಲ್ ಟೋಲ್‌ಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ. ಅವುಗಳು ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳ ನಂಬರ್ ಪ್ಲೇಟ್ ಅನ್ನು ಗುರುತಿಸುತ್ತವೆ. ಬಳಿಕ ವಾಹನ ಪ್ರಯಾಣಿಸಿದ ದೂರವನ್ನು ಲೆಕ್ಕಾಚಾರ ಮಾಡಿ ಅದಕ್ಕೆ ಅನುಗುಣವಾಗಿ ಪ್ರಯಾಣಿಕರ ಬ್ಯಾಂಕ್ ಖಾತೆಯಿಂದ ಟೋಲ್ ಶುಲ್ಕವನ್ನು ಸ್ವಯಂಚಾಲಿತವಾಗಿ ಕಡಿತಗೊಳಿಸಲಾಗುತ್ತದೆ. ಜತೆಗೆ ವಿವಿಧ ವಿವರಗಳ ಮೇಲ್ವಿಚಾರಣೆಗೆ ಜಿಪಿಎಸ್ ಬಳಸಲಾಗುತ್ತದೆ.

ಹೊಸ ವ್ಯವಸ್ಥೆಯಿಂದಾಗಿ ಈಗಿನ ಟೋಲ್ ಬೂತ್‌ಗಳನ್ನು ತೆಗೆದುಹಾಕಲಾಗುತ್ತದೆ. ಹೊಸದಾಗಿ ನಿರ್ಮಿಸುವ ಹೆದ್ದಾರಿಗಳಲ್ಲಿ ಟೋಲ್ ಕೇಂದ್ರಗಳ ನಿರ್ವಹಣೆ ಮತ್ತು ನಿರ್ಮಾಣ ವೆಚ್ಚಗಳನ್ನು ಉಳಿಸಬಹುದು. ಇದಲ್ಲದೆ, ಬಿಲ್ಲಿಂಗ್ ಪ್ರಕ್ರಿಯೆಯೂ ಸುಲಭವಾಗುತ್ತದೆ. ಈಗಿನ ವ್ಯವಸ್ಥೆಯಿಂದಾಗಿ ಹೆದ್ದಾರಿಗಳಲ್ಲಿ ಅರ್ಧ ಕಿಲೋ ಮೀಟರ್ ಸಂಚರಿಸಿದರೂ ಪೂರ್ಣ ಶುಲ್ಕವನ್ನು ಪಾವತಿಸಬೇಕಿದೆ. ಹೊಸ ವ್ಯವಸ್ಥೆಯಿಂದ ಹೆದ್ದಾರಿಗಳಲ್ಲಿ ಸಂಚರಿಸಿದ ಅಂತರಕ್ಕೆ ಅನುಗುಣವಾಗಷ್ಟೇ ಹಣ ಪಾವತಿ ಸಾಧ್ಯವಾಗಲಿದೆ.

ಉಪಗ್ರಹ ಆಧರಿತ ಟೋಲ್ ವ್ಯವಸ್ಥೆ ಜಾರಿಗೆ ದೇಶದಲ್ಲಿ ಹಲವು ಸವಾಲುಗಳು ಎದುರಾಗುವ ಸಾಧ್ಯತೆ ಇದೆ. ಪ್ರಸ್ತುತ ಬಳಸಲಾಗುವ ಫಾಸ್‌ಟ್ಯಾಗ್‌ಗೆ ಹೋಲಿಸಿದರೆ, ಹೊಸ ವ್ಯವಸ್ಥೆಯು ಮುಂದುವರೆದ ತಂತ್ರಜ್ಞಾನವಾಗಿದೆ. ಹೀಗಾಗಿ, ಈ ಬಗ್ಗೆ ಸರ್ಕಾರವು ವಾಹನ ಸವಾರರಿಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಇನ್ನಷ್ಟೇ ಹೊರಹಾಕಬೇಕಿದೆ. ವಾಹನ ದಟ್ಟಣೆ ಇರುವ ಹೆದ್ದಾರಿಗಳಲ್ಲಿ ವಾಹನಗಳ ನಿಖರ ಡೇಟಾವನ್ನು ಈ ವ್ಯವಸ್ಥೆ ಸಂಗ್ರಹಿಸುವುದೇ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ■